ಮಾತನ್ನು ಅಲ್ಲೇ ಮೊಟಕುಗೊಳಿಸಿ 'ನೀವೆಲ್ಲ ಊಟ ತಂದುಕೊಳ್ಳಿ, ನಾಳೆ ಸಿಗುವಾ' ಎನ್ನುತ್ತ ತನ್ನ ಚೇಲಾಗಳ ಹತ್ತಿರ ನಡೆದ. ಬಶೀರ ಹತ್ತಿರ ಹೋದವನೇ 'ಎಲ್ಲಪ್ಪಾ ಎಲ್ಲ? ಪತ್ತೆನೇ ಇಲ್ಲ. ಪೊಲೀಸ್ ಬಂದ ಅಂತ ಓಡಿ ಹೋಗಿಬಿಟ್ಟರಲ್ಲೊ ಮಕ್ಕಳಾ, ಶಿರ್ಕ್ಯ ಇನ್ನೂ ಪತ್ತೆ ಇಲ್ಲಾ ಗೊತ್ತಾ... ಬರಲಿ ಹಲ್ಕಾ ನನ ಮಗ ಮಾಡತೀನಿ' ಎಂದ.

'ಸುಮ್ನಿರಪ್ಪಾ ನೀನು... ನಾಳೆ ನಮ್ಮ ಕಾಲೇಜಿನಿಂದ ತೆಗೆದು ಹಾಕಿದರೆ ನೀ ಬರತಿಯಾ ಪ್ರಿನ್ಸಿಪಾಲರ ಹತ್ತಿರ. ಹೆಚ್ಚುಕಡಿಮೆ ಆಗಿದ್ದರೆ ಮೊನ್ನೆನೇ ಸ್ಟೇಷನ್ನಿನಲ್ಲಿ ನಿನಗೆ ಪಾಟಿ ಹಿಡಿಸುತ್ತಿದ್ದರು...'

'ಪೊಕ್ಕು ನನ್ನಕ್ಕು ನೀವು, ನೀವೆಲ್ಲಾ ಬರ್ತೀರಿ ಎಂದೇ ದುಡ್ಡು ಮಾತನಾಡಿದ್ದು. ಈಗ ನೀವೆಲ್ಲಾ ಕೈಕೊಟ್ಟರೆ... ನಿಮ್ಮ ಪಾಲಿನ ದುಡ್ಡೆಲ್ಲಾ ನಾನೇ ಸೇರಿಸಿ ಕೊಟ್ಟೆ ಗೊತ್ತಾ ಅವಳಿಗೆ.'

'ಹೋಗಲಿ ಬಿಡಪ್ಪಾ... ಅದ ಹೇಳು, ಮೊನ್ನೆ ನಿನ್ನ ಪಾಲಿನ ಕಾಸಾದರೂ ಕೊಟ್ಟಿದ್ಯಾ ಅವಳಿಗೆ.' ಎಂದು ಅವರಲ್ಲೊಬ್ಬ ಕೇಳುತ್ತಿದ್ದಂತೆ ಎಲ್ಲರೂ ಊಟದ ಕ್ಯೂನಲ್ಲಿ ನಿಂತುಕೊಳ್ಳುತ್ತಿದ್ದರು. ಬಶೀರ ತನ್ನ ಬಿಟ್ಟು ನಾಲ್ಕು ಜನರಾದಮೇಲೆ ಹಿಂದೆ ನಿಂತಿದ್ದ ಆರಾಧ್ಯನನ್ನು ನೋಡುತ್ತಿದ್ದ. ಆತ ಹತ್ತಿರ ಬರುತ್ತಿದ್ದಂತೇ 'ಮೊನ್ನೆ ಪೊಲೀಸರ ಹತ್ತಿರ ಜೋರು ಮಾತಂತೆ. ಮತ್ತೆ ಅದೇನಾದರೂ ಓಪನ್ ಆದರೆ ನಿನ್ನ ಹೆಸರು ತಗಲಾಕಸ್ತೀನಿ' ಎಂದು ಹೇಳಿಬಿಟ್ಟ.

★★★

ಇಂದಲ್ಲಾ ನಾಳೆ, ಈ ವಾರ ಈ ಸುದ್ದಿ ಕಾಲೇಜಿನಲ್ಲಿ ಹಬ್ಬಿ ಬಶೀರನನ್ನು ಕಾಲೇಜಿನಿಂದ ತೆಗೆದುಹಾಕುತ್ತಾರೆ ಎಂದು ಆರಾಧ್ಯ ಮತ್ತು ಆತನ ಇತರ ಚೇಲಾಗಳು ಅಂದುಕೊಳ್ಳುತ್ತಿದ್ದರು. ಒಂದಿಬ್ಬರು ಮೂರು ವಾರಗಳ ನಂತರ ರಜಾ ಹಾಕಿ ಊರಿಗೆ ಹೋಗುವವರು ಅದನ್ನು ಹಿಂದಕ್ಕೆ ಜರುಗಿಸಿ ಆಗಲೇ ಊರಲ್ಲಿದ್ದರು. ಆದರೆ ಈ ಘಟನೆಯಾದ ನಂತರ ಕಾಲೇಜಿನ ಕೆಲವು ಗುಮಾಸ್ತರು, ಅಟೆಂಡರುಗಳು, ಇನ್ನೆರಡು ತಿಂಗಳಲ್ಲಿ ಬಿಟ್ಟುಹೋಗುತ್ತಿರುವ ಹುಡುಗರು ತುಂಬ ಸಲಿಗೆಯಿಂದ ಬಶೀರನನ್ನು ಮಾತನಾಡಿಸುತ್ತಿದ್ದರು. ಮುಖ್ಯವಾಗಿ ಹಾಸ್ಟೆಲ್ ವಾರ್ಡನ್ ಇತ್ತೀಚೆಗೆ ಬಶೀರನ ಹತ್ತಿರ ತುಂಬ ಸಲಿಗೆಯಿಂದ ಗಂಟೆಗಟ್ಟಲೆ ಮಾತನಾಡುತ್ತಾ ಎಪ್ಪತ್ತು ಕಿಲೋಮೀಟರ್ ದೂರವಿರುವ ತನ್ನ ತೋಟದ ಮನೆ, ಅಲ್ಲಿಯ ಶಾಂತ ವಾತಾವರಣ, ಅಲ್ಲಿ ಈ ರೀತಿ ಗಲಾಟೆ ಇಲ್ಲ. ಯಾರೂ ಡಿಸ್ಟರ್ಬ್ ಮಾಡೊದಿಲ್ಲ ಎಂದೆಲ್ಲಾ ತಿರುಗಾ ಮುರುಗಾ ಸಿಕ್ಕಿದಾಗೆಲ್ಲ ಹೇಳುತ್ತಿದ್ದ. ಅದಕ್ಕೆ ಬಶೀರ ಪ್ರತೀ ಸಲವೂ ಇದೇ ಮೊದಲು ಕೇಳಿಸಿಕೊಳ್ಳುತ್ತಿರುವನಂತೇ 'ಹೌದಾ ಸಾರ್... ಹೌದಾ ಸಾರ್...' ಎನ್ನುತ್ತಿದ್ದ. ಆ ಸಂದರ್ಭದಲ್ಲಿ ಮಾತ್ರ ಆತ ಕಿಕ್ ಕಿಕ್ ಕಿಕ್ ಎಂದು ನಗುತ್ತಿರಲಿಲ್ಲ.

**ಸಚ್ಚಿದಾನಂದ ಹೆಗಡೆ**

ಹೊಸ ತಲೆಮಾರಿನ ಕತೆಗಾರ ಸಚ್ಚಿದಾನಂದ ಹೆಗಡೆ ಭಾರತ ಮತ್ತು ಯುರೋಪ್‌ಗಳಲ್ಲಿ ಉನ್ನತ ಶಿಕ್ಷಣ ಪಡೆದಿದ್ದಾರೆ. ಅಮೆರಿಕ, ಯುರೋಪ್ ಮತ್ತು ಭಾರತದಲ್ಲಿ ತಮ್ಮ ವೃತ್ತಿ ಮುಂದುವರಿಸಿ ಈಗ ಚೀನಾ ದೇಶದ ಕಾರ್ ಡಿಸೈನ್ ಕಂಪನಿಯೊಂದರಲ್ಲಿ ಡಿಸೈನ್ ಡೈರೆಕ್ಟರ್ ಹುದ್ದೆಯಲ್ಲಿದ್ದಾರೆ. ಪ್ರಸ್ತುತ ಅವರು ಬೀಜಿಂಗ್‌ನಲ್ಲಿ ನೆಲೆಸಿದ್ದಾರೆ. ಅವರ ಕಥಾಸಂಗ್ರಹಗಳು: 'ಕಾರಂತಜ್ಜನಿಗೊಂದು ಪತ್ರ' 'ಮರೆವಿನ ಬಳ್ಳಿ'. ಯಕ್ಷಗಾನ ಕಲಾವಿದ ಕೆರೆಮನೆ ಮಹಾಬಲ ಹೆಗಡೆಯವರ ಜೀವನ ಚರಿತ್ರೆ 'ಮಹಾಬಲ'ದ ಸಹ ಲೇಖಕರು. ಅವರ 'ಕಾರಂತಜ್ಜನಿಗೊಂದು ಪತ್ರ' ಕತೆ ಸಿನಿಮಾ ಆಗಿದೆ.